# ದುಡ್ಡು ದೊಡ್ಡದಪ್ಪ..!

## ಪ್ರಶ್ನೋತ್ತರ

**ಸಿ ಎಸ್ ಸುಧೀರ್,** ಸಿಇಒ- ಸಂಸ್ಥಾಪಕರು
ಇಂಡಿಯನ್ ಮನಿ.ಕಾಂ



ಬ್ಯಾಂಕಿಂಗ್, ಹೂಡಿಕೆ, ಉಳಿತಾಯ, ಗಳಿಕೆ, ಸಾಲ, ವಿಮೆ ಹೀಗೆ ಆರ್ಥಿಕ ವಿಷಯಗಳಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ನೀವೂ ಕಳುಹಿಸಬಹುದು.

ಪ್ರಶ್ನೆ ಕಳುಹಿಸಬೇಕಾದ ಇ– ಮೇಲ್ ವಿಳಾಸ **sudheer@indianMoney.com**

# ಇವತ್ತಿನ ಉಳಿತಾಯ, ಭವಿಷ್ಯಕ್ಕೆ ಉತ್ತಮ ಆದಾಯ...!

**1) ನಮಸ್ಕಾರ ಸರ್. ನನ್ನ ಹೆಸರು ರಾಜಣ್ಣ. ವಯಸ್ಸು 36 ನಾನು ಮತ್ತು ನನ್ನ ಪತ್ನಿ ಸರಕಾರಿ ಪ್ರೌಢ ಶಾಲಾ ಶಿಕ್ಷಕರು. ನಮ್ಮ ಮಾಸಿಕ ಆದಾಯ 1 ಲಕ್ಷ. ಇದರಲ್ಲಿ ಜೀವ ವಿಮೆಗೆ 10 ಸಾವಿರ, GPF/NPSಗೆ 15 ಸಾವಿರ ಕಡಿತಗೊಳಿಸಿ ನಿವ್ವಳ 75 ಸಾವಿರ. ವಾಸಕ್ಕೆ ನಗರದಲ್ಲಿ ಸ್ವಂತ ಮನೆ ಮತ್ತು ಖಾಲಿ ನಿವೇಶನವಿದೆ. ಸ್ವಂತ ಬಳಕೆಗೆ ಕಾರಿದೆ. ಇದರ ವಾಹನ ಸಾಲ ಪೂರ್ಣ ಪಾವತಿಸಿದ್ದೇವೆ. ಯಾವುದೇ ಸಾಲಗಳಿಲ್ಲ. ಈಗ ನಮಗೆ ಒಂದು ವರ್ಷದ ಮಗನಿದ್ದು ಅವನ ಮುಂದಿನ ಶಿಕ್ಷಣ ಮತ್ತು ಭವಿಷ್ಯಕ್ಕಾಗಿ ಮ್ಯೂಚುವಲ್ ಫಂಡ್ಸ್, ಗೋಲ್ಡ್ ಇಟಿಎಫ್, ಖಾಲಿ ನಿವೇಶನ ಖರೀದಿ ಇತರೆ ಯೋಜನೆಗಳಲ್ಲಿ ಸುಮಾರು 40 ಸಾವಿರದಷ್ಟು ಮಾಸಿಕವಾಗಿ 15 ವರ್ಷಗಳ ಅವಧಿಗೆ ವಿನಿಯೋಗ ಮಾಡಬೇಕೆಂದು ವಿಚಾರ ಮಾಡುತ್ತಿದ್ದೇವೆ. ಈ ವಿಚಾರದಲ್ಲಿ ಯಾವ ಯೋಜನೆಗಳಲ್ಲಿ ಹೂಡಿಕೆ ಮಾಡಬೇಕೆಂಬುದರ ಬಗ್ಗೆ ನಿಮ್ಮ ಸೂಕ್ತ ಮಾರ್ಗದರ್ಶನ ಕೋರುತ್ತಿದ್ದೇವೆ. ಧನ್ಯವಾದಗಳು.**

ವ್ಯವಸ್ಥಿತ ಹೂಡಿಕೆಯಿಂದ ಮಾತ್ರ ಉಳಿತಾಯ ಸಾಧ್ಯ ಎನ್ನುವುದನ್ನು ಮನಗಂಡು ನೀವು ಸರಿಯಾದ ಹಾದಿಯಲ್ಲೇ ಸಾಗುತ್ತಿದ್ದೀರಿ. ಅದರಂತೆ ಮುನ್ನಡೆಯಿರಿ. ಮ್ಯೂಚುವಲ್ ಫಂಡ್, ಗೋಲ್ಡ್ ಇಟಿಎಫ್, ಖಾಲಿ ನಿವೇಶನ ಖರೀದಿ ಇತರೆ ಯೋಜನೆಗಳಲ್ಲಿ ತೊಡಗಿಸುವುದು ಸರಿಯಾದ ದಿಕ್ಕಿನ ಚಿಂತನೆ ಎನ್ನಬಹುದು. ಸಾಧ್ಯವಾದರೆ ಪಿಪಿಎಫ್‌ನಲ್ಲಿ ಹಣ ತೊಡಗಿಸಲು ಯೋಚಿಸಿ. ದೀರ್ಘಾವಧಿಯಲ್ಲಿ ಇದು ಸುರಕ್ಷಿತ ಮಾದರಿಯ ಹೂಡಿಕೆ. ಇದಲ್ಲದೆ ಹೆಲ್ತ್ ಇನ್ಶೂರೆನ್ಸ್ ಪಾಲಿಸಿಯನ್ನು ನಿಮ್ಮ ತಂದೆ ತಾಯಿಗೂ ಒಳಗೊಂಡಂತೆ ಮಾಡಿಸಿಕೊಳ್ಳಿ, ಟರ್ಮ್ ಇನ್ಶೂರೆನ್ಸ್ ಬಗ್ಗೆಯೂ ನೀವು ಯೋಚಿಸಬಹುದು. ಮುಂದಿನ ಪ್ಯಾರಾದಲ್ಲಿ ನಾನು ಟರ್ಮ್ ಇನ್ಶೂರೆನ್ಸ್ ಬಗ್ಗೆ ವಿವರಿಸುತ್ತೇನೆ.

### ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆಗೂ ಮುನ್ನ ಗಮನಿಸಿ–

ಮ್ಯೂಚುವಲ್ ಫಂಡ್‌ನಲ್ಲಿ ಲಾರ್ಜ್, ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಎಂಬ ಮೂರು ವಿಧಗಳಿವೆ. ಲಾರ್ಜ್ ಎಂದರೆ ದೊಡ್ಡ ಮಟ್ಟದಲ್ಲಿ ವ್ಯವಹಾರ ನಡೆಸುವ ಕಂಪನಿಗಳು. ಅದೇ ರೀತಿ ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಅಂದ್ರೆ ಮಧ್ಯಮ ಮತ್ತು ಸಣ್ಣ ಗಾತ್ರದ ಕಂಪನಿಗಳು. ಲಾರ್ಜ್ ಕ್ಯಾಪ್ ಕಂಪನಿಗಳ ಮ್ಯೂಚುವಲ್ ಫಂಡ್‌ಗಳ ಮೇಲಿನ ಹೂಡಿಕೆಯಲ್ಲಿ ರಿಸ್ಕ್ ಕಡಿಮೆ. ಭಾರಿ ಮೌಲ್ಯದ ಕಂಪನಿಗಳು ಮಾರುಕಟ್ಟೆಯ ಏರಿಳಿತಗಳಿಂದ ಹೆಚ್ಚು ಪ್ರಭಾವಕ್ಕೆ ಒಳಗಾಗುವುದಿಲ್ಲ. ಮಿಡ್ ಮತ್ತು ಸ್ಮಾಲ್ ಕ್ಯಾಪ್ ಫಂಡ್‌ಗಳಲ್ಲಿ ರಿಸ್ಕ್ ಜಾಸ್ತಿ. ಹಾಗಾಗಿ ನೀವು ಲಾರ್ಜ್ ಕ್ಯಾಪ್ ಮ್ಯೂಚುವಲ್ ಫಂಡ್ ಗಳಲ್ಲಿ ಹೂಡಿಕೆಗೆ ಚಿಂತಿಸಬಹುದು. ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಲ್ಪಟ್ಟ ಹಣ, ಫಂಡ್ ಮ್ಯಾನೇಜರ್, ಸೆಬಿ ಮತ್ತು ಅಸೋಸಿಯೇಷನ್ ಆಫ್ ಮ್ಯೂಚುವಲ್ ಫಂಡ್ ಸಂಸ್ಥೆಗಳ ನಿಗಾದಲ್ಲಿ ಇರುತ್ತದೆ. ಹಾಗಾಗಿ ನಿಮ್ಮ ಹಣ ಹೆಚ್ಚು ಸುರಕ್ಷಿತ ಎನ್ನಬಹುದು. ಆದರೂ ಮ್ಯೂಚುವಲ್ ಫಂಡ್‌ನಲ್ಲಿ ರಿಸ್ಕ್ ಇದ್ದೇ ಇರುತ್ತದೆ ಎನ್ನುವುದನ್ನು ನೀವು ಮರೆಯಬಾರದು.

### ಟರ್ಮ್ ಇನ್ಶೂರೆನ್ಸ್ ಬಗ್ಗೆ–

ಇದಲ್ಲದೆ ಕಡಿಮೆ ಪ್ರೀಮಿಯಂಗೆ ಹೆಚ್ಚು ಭದ್ರತೆ ಒದಗಿಸುವ ಟರ್ಮ್ ಇನ್ಶೂರೆನ್ಸ್ ಪ್ಲಾನ್‌ನಲ್ಲಿ ಹೂಡಿಕೆ ಮಾಡುವ ಬಗ್ಗೆಯೂ ನೀವು ಯೋಚಿಸಬಹುದು. ವರ್ಷಕ್ಕೆ 10 ರಿಂದ 12 ಸಾವಿರ ರೂ. ಪ್ರೀಮಿಯಂ ಕಟ್ಟಿದರೆ ನಿಮಗೆ ಸುಮಾರು 1 ಕೋಟಿ ಮೊತ್ತದಷ್ಟು ಇನ್ಶೂರೆನ್ಸ್ ಕವರೇಜ್ ಸಿಗುತ್ತದೆ. ಮನೆಯ ಯಜಮಾನನ ಅನುಪಸ್ಥಿತಿಯಲ್ಲೂ ಕುಟುಂಬಕ್ಕೆ ಒಂದಿಷ್ಟು ದೊಡ್ಡ ಮೊತ್ತದ ಆರ್ಥಿಕ ನೆರವು ಒದಗಿಸುವ ವಿಶಿಷ್ಟ ಯೋಜನೆಯೇ ಟರ್ಮ್ ಇನ್ಶೂರೆನ್ಸ್. ಹಲವಾರು ಕಂಪನಿಗಳು ಟರ್ಮ್ ಇನ್ಶೂರೆನ್ಸ್ ನೀಡುತ್ತಿದ್ದು, ನಿಮಗೆ ಸೂಕ್ತವೆನಿಸುವ ಟರ್ಮ್ ಪ್ಲಾನ್ ಪಡೆದುಕೊಳ್ಳಿ.

**2) ನನ್ನ ಹೆಸರು ಸುಧಾ. 30 ವರ್ಷದ ನಾನು ರೈಲ್ವೆ ಇಲಾಖೆಯಲ್ಲಿ ಡಿ ಗ್ರೂಪ್ ನೌಕರಳಾಗಿ ಕೆಲಸ ನಿರ್ವಹಿಸುತ್ತಿದ್ದೇನೆ. ನನ್ನ ಒಟ್ಟು ವೇತನ 31 ಸಾವಿರ ರೂ. ಇದ್ದು ಕೈಗೆ 24 ಸಾವಿರ ರೂ. ಬರುತ್ತದೆ. ನಮ್ಮ ಹಳ್ಳಿಯಲ್ಲಿ ಸ್ವಲ್ಪ ಜಾಗ ಇದ್ದು ಮನೆ ಕಟ್ಟಬೇಕು ಎಂದುಕೊಂಡಿದ್ದೇನೆ. ಇದಕ್ಕೆ ಬ್ಯಾಂಕ್‌ನಲ್ಲಿ ಲೋನ್ ಸಿಗುತ್ತಾ? ದಯವಿಟ್ಟು ತಿಳಿಸಿ.**

ನಿಮಗೆ ಮನೆ ಕಟ್ಟಲು ಎಷ್ಟು ಸಾಲ ಬೇಕು ಎಂದು ತಿಳಿಸಿಲ್ಲ. ನೀವು ಸರ್ಕಾರಿ ಉದ್ಯೋಗದಲ್ಲಿರುವುದರಿಂದ ಗೃಹ ಸಾಲ ಪಡೆಯುವುದು ಸ್ವಲ್ಪ ಸುಲಭವೇ. ನೀವು ಅಕೌಂಟ್ ಹೊಂದಿರುವ ಅಥವಾ ನೀವು ಮಾಸಿಕ ಸಂಬಳ ಪಡೆದುಕೊಳ್ಳುತ್ತಿರುವ ಬ್ಯಾಂಕ್‌ನಲ್ಲಿ ವಿಚಾರಿಸಿ ಸಾಲ ಪಡೆದುಕೊಳ್ಳಬಹುದು. ಉದಾಹರಣೆ ನೀವು 2 ಲಕ್ಷ ರೂ. ಗೃಹ ಸಾಲವನ್ನು 20 ವರ್ಷಗಳ ಮಾಸಿಕ ಕಂತಿನಲ್ಲಿ ತೀರಿಸಲು ನಿರ್ಧರಿಸಿದ್ದೀರಿ ಎಂದಾದರೆ ಮಾಸಿಕವಾಗಿ ನೀವು 2 ಸಾವಿರ ರೂಗಳನ್ನು ಬ್ಯಾಂಕಿಗೆ ಮರುಪಾವತಿ ಮಾಡಬೇಕಾಗುತ್ತದೆ. ಕೆಲ ಬ್ಯಾಂಕ್‌ಗಳು 30 ವರ್ಷಗಳವರೆಗೂ ಗೃಹ ಸಾಲ ನೀಡುತ್ತವೆ. ಸಾಲ ನೀಡುವಾಗ ಬ್ಯಾಂಕ್‌ಗಳು ನಿಮ್ಮ ಮರುಪಾವತಿ ಸಾಮರ್ಥ್ಯವನ್ನು ಪರಿಗಣಿಸುತ್ತವೆ. ನಿಮ್ಮ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ನೀವು ಬ್ಯಾಂಕ್‌ನಲ್ಲಿ ಐದಾರು ಲಕ್ಷಗಳವರೆಗೆ ಸಾಲ ಪಡೆಯಲು ಯಾವುದೇ ಸಮಸ್ಯೆಯಿಲ್ಲ.

**3) ನಾನು ಮಂಗಳೂರಿನ ಚಂದ್ರಹಾಸ ರೈ. ನೀವು ಬರೆದಿರುವ ಲವ್ ಬಿಯಾಂಡ್ ಡೆತ್ ಪುಸ್ತಕ ಓದಿದ ಮೇಲೆ ಟರ್ಮ್ ಇನ್ಶೂರೆನ್ಸ್ ಖರೀದಿ ಮಾಡಲು ನಿರ್ಧರಿಸಿದ್ದೇನೆ. ಆದರೆ ಟರ್ಮ್ ಇನ್ಶೂರೆನ್ಸ್ ಅನ್ನು ಆನ್‌ಲೈನ್‌ನಲ್ಲಿ ಖರೀದಿಸಬೇಕೇ, ಅಥವಾ ಏಜೆಂಟ್ ಮೂಲಕ ಖರೀದಿಸಬೇಕೇ ಎನ್ನುವ ಬಗ್ಗೆ ಗೊಂದಲವಿದೆ. ದಯವಿಟ್ಟು ಸಲಹೆ ನೀಡಿ.**

ಲವ್ ಬಿಯಾಂಡ್ ಡೆತ್ ಪುಸ್ತಕವನ್ನು ನಾನು ಸಾಮಾಜಿಕ ಕಳಕಳಿಯ ದೃಷ್ಟಿಯಿಂದ ಬರೆದಿದ್ದೇನೆ. ನನ್ನ ಪುಸ್ತಕ ಖರೀದಿಸಿ ಓದಿದ್ದಕ್ಕೆ ನಿಮಗೆ ಧನ್ಯವಾದಗಳು. ನಿಮ್ಮ ಮರಣದ ನಂತರದಲ್ಲೂ ನಿಮ್ಮ ಕುಟುಂಬಕ್ಕೆ ಆರ್ಥಿಕ ಭದ್ರತೆ ನೀಡುವ ವಿಮೆಯೇ ಟರ್ಮ್ ಇನ್ಶೂರೆನ್ಸ್ ಪಾಲಿಸಿ. ಟರ್ಮ್ ಇನ್ಶೂರೆನ್ಸ್ ಅನ್ನು ಸಾಧ್ಯವಾದಷ್ಟು ಆನ್‌ಲೈನ್‌ನಲ್ಲೇ ಖರೀದಿಸುವುದು ಉತ್ತಮ, ಇತ್ತೀಚಿನ ದಿನಗಳಲ್ಲಿ ಹಲವಾರು ಕಂಪನಿಗಳು ಆನ್‌ಲೈನ್ ಮೂಲಕ ವಿಮೆ ಸೌಲಭ್ಯ ಒದಗಿಸುತ್ತಿರುವುದರಿಂದ ಖರೀದಿ ಸುಲಭವಾಗಿದೆ. ಆನ್‌ಲೈನ್‌ನಲ್ಲಿ ವಿಮೆ ಖರೀದಿಸುವ ಮುನ್ನ ಬೇರೆ ಬೇರೆ ಕಂಪನಿಗಳ ವೆಬ್‌ಸೈಟ್‌ಗೆ ಹೋಗಿ ಯಾವುದು ಉತ್ತಮ ಲಾಭ ನೀಡುತ್ತದೆ ಎನ್ನುವುದನ್ನು ಖಚಿತಪಡಿಸಿಕೊಳ್ಳಬೇಕು. ಸಾಮಾನ್ಯವಾಗಿ ಟರ್ಮ್ ಇನ್ಶೂರೆನ್ಸ್ ಬಗ್ಗೆ ಏಜೆಂಟ್‌ಗಳು ಹೆಚ್ಚು ಆಸಕ್ತಿ ತೋರುವುದಿಲ್ಲ ಎಂದು ಹೇಳಬಹುದು. ಯಾಕಂದ್ರೆ ಅದರಲ್ಲಿ ಏಜೆಂಟ್‌ಗಳಿಗೆ ಹೆಚ್ಚಿನ ಕಮಿಷನ್ ಸಿಗುವುದಿಲ್ಲ. ಟರ್ಮ್ ಲೈಫ್ ಇನ್ಶೂರೆನ್ಸ್ ಇಂದು ಪ್ರತಿಯೊಬ್ಬರಿಗೂ ಅನಿವಾರ್ಯವಾಗಿಬಿಟ್ಟಿದೆ. ಹಲವರು ಇದನ್ನು ಎಂಡೋವ್‌ಮೆಂಟ್ ಪಾಲಿಸಿ ಎಂದು ತಪ್ಪು ತಿಳಿದುಕೊಳ್ಳುತ್ತಾರೆ. ಟರ್ಮ್ ಇನ್ಶೂರೆನ್ಸ್‌ನಲ್ಲಿ ಹಣ ವಾಪಸ್ ಬರುವುದಿಲ್ಲವಾದ್ರೂ ಇಲ್ಲಿ ಎಲ್ಲದಕ್ಕಿಂತಲೂ ಹೆಚ್ಚಿನ ಇನ್ಶೂರೆನ್ಸ್ ಕವರೇಜ್ ಇರುತ್ತದೆ. ಹಾಗಾಗಿ ಎಂಡೋವ್‌ಮೆಂಟ್ ಪಾಲಿಸಿ ಮಾಡಿಸುವ ಮುನ್ನ ಟರ್ಮ್ ಇನ್ಶೂರೆನ್ಸ್ ಪಾಲಿಸಿ ಮಾಡಿಸುವುದು ಒಳಿತು.

IndianMoney.com

ಉಚಿತ ಆರ್ಥಿಕ ಸಲಹೆಗಾಗಿ ಮಿಸ್ ಕಾಲ್ ಕೊಡಿ
022 6181 6111